ಹತ್ತಿರವಾದ. ಇಬ್ಬರಲ್ಲಿ ಅಗೋಚರ ಅನುಬಂಧ, ವ್ಯಾಮೋಹ, ಪ್ರೇಮಪಾಶ ಬಂಧಿಸಿತು. ಸಮಾನ ಮನಸ್ಕರಾದ ಇಬ್ಬರೂ ಪ್ರೇಮಲೋಕದಲ್ಲಿ ವಿಹರಿಸಿ, ಜೋಡಿಹಕ್ಕಿಗಳಂತೆ ನೀಲಾಕಾಶದಲ್ಲಿ ಹಾರಿದಂತೆ ಕನಸು ಕಂಡಿದ್ದರು.

ಕ್ರಮೇಣ ಅನಿಲ್ ರಂಜನಿಯ ಸ್ನೇಹ, ತಡವಾಗಿ ಮನೆಗೆ ಪತಿ ಆಗಮಿಸುವುದು ಸುನೀತಾಳಿಗೆ ಸಹ್ಯವಾಗಲಿಲ್ಲ. ತಾನೂ ಸಲಿಗೆಯಿಂದ ಆಫೀಸಿನಲ್ಲಿ ರಮೇಶನೊಂದಿಗೆ ಸ್ನೇಹದಿಂದಿರುವುದು ಸರಿಯೆ? ಎಂದು ತನ್ನಲ್ಲಿ ಪ್ರಶ್ನಿಸಿಕೊಂಡಳು. ಎರಡು ಮಕ್ಕಳ ತಾಯಿಯಾಗಿ, ಮನೆಯ ಸಂಸಾರದ ಜವಾಬ್ದಾರಿ ಸರಿಯಾಗಿ ನಿರ್ವಹಿಸದೇ, ಪತಿಯಂತೆ ತಾನೂ ದಾರಿ ತಪ್ಪಿದರೆ, ಮಕ್ಕಳ ಭವಿಷ್ಯದ ಗತಿಯೇನೆಂದು ಧುತ್ತನೆ ಭಾವನೆಗಳ ಸರಮಾಲೆ ಅವಳ ತಲೆಯಲ್ಲಿ ಚಿಂತೆಯ ತರಂಗಗಳನ್ನೆಬ್ಬಿಸಿದವು. ರಮೇಶನ ಸಹವಾಸಕ್ಕೆ ಕಡಿವಾಣ ಹಾಕಿ, ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಬೇಕೆಂದು ತೀರ್ಮಾನಿಸಿ, ಸ್ವಗತ ಹೇಳಿಕೊಂಡಳು.

ಹತ್ತಿರದ ದೇವಸ್ಥಾನಕ್ಕೆ ಮರುದಿವಸ ಹೊರಟು, ದೇವರಿಗೆ ಅರ್ಚನೆ ಮಾಡಿಸಿ, ದೂರದಲ್ಲಿ ಕುಳಿತು, ತಾನು ಮಾಡಿದ ಚರ್ಯೆ, ರಮೇಶನ ಮೇಲಿನ ಪ್ರೀತಿ, ಒಲುಮೆಗೆ ಪಶ್ಚಾತ್ತಾಪಪಟ್ಟಳು. ದಾರಿ ತಪ್ಪುವ ಮುಂಚೆ ದೇವರೇ ತನ್ನನ್ನು ಸನ್ಮಾರ್ಗದಲ್ಲಿ ನಡೆಸಿ, ಕೈಹಿಡಿ ಎಂದು ಪ್ರಾರ್ಥಿಸಿಕೊಂಡಳು. ಅವಳ ಮನ ಹಗುರವಾಗಿತ್ತು.

ಅನಿಲ್ ಕಂಪನಿಗೆ ಹೊರಡಲು ತರಾತುರಿಯಲ್ಲಿದ್ದಾಗ, ಮನೆಯ ಅಲ್ಮೇರಾದಲ್ಲಿದ್ದ ಡೈರಿ ಥಟ್ಟನೆ ಕೆಳಗೆ ಬಿದ್ದಿತು. ಸೋಜಿಗದಿಂದ ಡೈರಿ ತೆರೆದು ನೋಡಿದಾಗ, ಸುನೀತ ಚಾಚೂ ತಪ್ಪದೇ ತನ್ನ ರಮೇಶನ ಸ್ನೇಹ, ಸಲಿಗೆ, ಪರಸ್ಪರ ಆಕರ್ಷಣೆಯ ವಿವರ ನಮೂದಿಸಿದಳು. ಅಚ್ಚರಿಯಿಂದ, ಅನಿಲ್ ಸಂಪೂರ್ಣವಾಗಿ ಡೈರಿಯಲ್ಲಿದ್ದ ಸುನೀತಾಳ ಕೈಬರಹ ಓದಿ ದಿಗ್ಭ್ರಾಂತನಾದ. ಆಘಾತದ ಸುದ್ದಿ ಡೈರಿ ಬಹಿರಂಗಪಡಿಸಿತ್ತು ! ಕೊನೆಯ ಸಾಲಿನಲ್ಲಿ ಪಶ್ಚಾತ್ತಾಪಪಟ್ಟು, ಸುನೀತಾ, ದೇವರ ಕ್ಷಮೆ ಇರಲಿ ಎಂದು ವಿನಂತಿಸಿದ್ದು ಅನಿಲ್‌ಗೆ ಅಚ್ಚರಿಯಾಗಿತ್ತು.

ಪತ್ನಿಯ ನಡವಳಿಕೆಗೆ ಕ್ಷಮಿಸಿದ ಅನಿಲ್, ರಂಜನಿಯ ಆಕರ್ಷಣೆಗೆ ಮನಸೋತಿದ್ದ! ಪುರುಷ ಪ್ರಧಾನ ಸಮಾಜದಲ್ಲಿ, ಸಹಜವಾದ ಪ್ರಕ್ರಿಯೆಗೆ ಅನಿಲ್ ಹೊರತಾಗಿರಲಿಲ್ಲ. ವೀಕೆಂಡ್, ರಂಜನಿ ಕರೆಗೆ ಮನಸೋತು ಅವಳನ್ನು ಹಿಂಬಾಲಿಸುತ್ತಿದ್ದ. ಆದರೂ ಅವನ ಒಳಮನಸ್ಸು ಸುನೀತಾಳ ಬಗ್ಗೆ, ಅವಳ ಪಶ್ಚಾತ್ತಾಪದ ಡೈರಿಯ ಒಕ್ಕಣೆ ಆಘಾತಗೊಳಿಸಿತ್ತು. ಸುನೀತಾ ಸಂಸಾರದ ಬಗ್ಗೆ, ಮಕ್ಕಳ ಭವಿಷ್ಯ, ವಿದ್ಯಾಭ್ಯಾಸದ ಚಿಂತೆಯಲ್ಲಿ ಮುಳುಗಿ ಕೊರಗುತ್ತಿರುವಾಗ, ತಾನು ಕಂಪನಿಯ ಬಾಸ್ ಎನಿಸಿಕೊಂಡು ವ್ಯವಹಾರದ ಕಡೆಗೆ ಗಮನಹರಿಸದೆ, ಸಹೋದ್ಯೋಗಿ ಸುಂದರ ಯುವತಿ ರಂಜನಿ ಜೊತೆಗೆ ಸುತ್ತಾಡುವುದು ಸರಿಯೆ? ಪತ್ನಿ ಎಲ್ಲವನ್ನೂ ತ್ಯಾಗ ಮಾಡಿ, ಸಂಸಾರದ ಜವಾಬ್ದಾರಿ ಸಂಪೂರ್ಣವಾಗಿ ನಿರ್ವಹಿಸಲು ಸಿದ್ಧಳಾದಾಗ, ಜವಾಬ್ದಾರಿಯುತ ಪತಿ ತಾನು ಹಾದಿ ತಪ್ಪಬಾರದು. ಸಂಸಾರದ ನೊಗ ಇಬ್ಬರೂ ಹೊತ್ತರೆ, ಮಕ್ಕಳ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲವೆಂದು, ನಾಚಿ ನೀರಾಗಿ, ರಂಜನಿಗೆ ಎಲ್ಲವನ್ನೂ ಹೇಳಿ ಮನ ಹಗುರ ಮಾಡಬೇಕೆಂದು ನಿರ್ಧರಿಸಿದ. 'ಸಂಸಾರ ಉಸಿರಿರುವವರೆಗೆ, ಸಂಸ್ಕಾರ ಉಸಿರು ನಿಂತ ಮೇಲೆ' ಎಂದು ಪರ್ಯಾಲೋಚಿಸಿ, ತಾನು ಸಲಿಗೆಯಿಂದ ವರ್ತಿಸಿದ ಚರ್ಯೆ, ಸುತ್ತಾಟ, ಪ್ರೀತಿಸುವ ಹುಚ್ಚಾಟ, ರಂಜನಿಗೆ ಹೇಳಿ ಕ್ಷಮಿಸಬೇಕೆಂದು ಅವಳ ಕೈ ಹಿಡಿದು ಬೇಡಿಕೊಳ್ಳಬೇಕೆಂದು ನಿರ್ಧರಿಸಿದ ಆ ಕ್ಷಣ ದೈವ ನಿರ್ಣಯವಾಗಿತ್ತು.

ರಂಜನಿ ಕಂಪನಿಯ ಕೆಲಸ ಪ್ರಾಮಾಣಿಕವಾಗಿ ನಿರ್ವಹಿಸಿ, ಅನಿಲ್ ಮತ್ತು ಮೇಲಧಿಕಾರಿಗಳಿಂದ ಪ್ರಶಂಸೆಯ ಸರ್ಟಿಫಿಕೇಟ್ ಪಡೆದಿದ್ದು ಸುಂದರ ಕ್ಷಣವಾಗಿತ್ತು.

'ಸಾರ್, ಈ ದಿನ ನನ್ನ ಬರ್ತ್‌ಡೇ. ನೀವು ನಮ್ಮ ಮನೆಗೆ ರಾತ್ರಿ ಡಿನ್ನರ್‌ಗೆ ಬರುವಿರಾ?' ಎಂದು ರಂಜನಿ ಆಹ್ವಾನಿಸಿದಳು.

'ಶೂರ್, ಡಿನ್ನರ್‌ಗೆ ಬರುವೆ' ಎಂದ ಅನಿಲ್ ಅವಳ ಕೈ ಕುಲುಕಿ ನಗೆ ಬೀರಿದ.

ರಂಜನಿ ತಾಯಿಯೊಂದಿಗೆ ಬರ್ತ್‌ಡೆ ಸಿದ್ಧತೆ ಮಾಡಿದ್ದಳು. ಮನೆಯ ಸಾಮಾನುಗಳನ್ನು ಓರಣವಾಗಿ ಜೋಡಿಸಿ, ದೀಪಾಲಂಕಾರ ಮಾಡಿ, ಸೊಗಸಾದ ಭೋಜನದ ವ್ಯವಸ್ಥೆ ಮಾಡಿದ ವಾತಾವರಣ ನೋಡಿ ಅನಿಲ್ ಹರ್ಷಿಸಿ, ತಾನು ತಂದ ಗಿಫ್ಟ್ ರಂಜನಿಯ ಕೈಯಲ್ಲಿರಿಸಿದ. ತಾಯಿಯ ಪರಿಚಯ ಮಾಡಿಸಿ, ರಂಜನಿ, ಭಾವಗೀತೆಯ ಹಾಡು ಸೊಗಸಾಗಿ ಆಲಿಸುವಂತೆ, ಟೇಪ್ ರೆಕಾರ್ಡರ್ ಆನ್ ಮಾಡಿದಳು. ಸುಂದರ ಉಡುಪಿನೊಂದಿಗೆ ರಂಜನಿ ಭುವಿಯ ದೇವತೆಯಂತೆ ಭಾಸವಾದಳು ಅನಿಲ್‌ಗೆ.

ಡಿನ್ನರ್ ಮುಗಿಸಿ ಅನಿಲ್ ಮನೆಗೆ ತೆರಳಲು ಸಜ್ಜಾದಾಗ, ರಂಜನಿ ಅನಿಲ್‌ಗೆ 'ರಿಟರ್ನ್ ಗಿಫ್ಟ್' ನೀಡಿದಳು. ಇಲ್ಲೇ ತೆರೆದು ನೋಡಿ ಎಂದಳು.

ಅಚ್ಚರಿಯಿಂದ ಅನಿಲ್ 'ರಿಟರ್ನ್ ಗಿಫ್ಟ್' ಬಾಕ್ಸ್ ತೆರೆದು ನೋಡಿ ದಿಗ್ಭ್ರಾಂತನಾದ. ಮೈ ಬೆವರಿಳಿಯಿತು. ನೆಲ ಕುಸಿಯುವ ಹಾಗಾಯಿತು. ತನ್ನ ಆಲೋಚನೆಗೆ, ರಂಜನಿಯ ಮೈಮಾಟಕ್ಕೆ, ಅವಳ ಹಾವಭಾವಕ್ಕೆ, ನಿರರ್ಗಳ ಮಾತಿನ ವೈಖರಿಗೆ ಮಾರು ಹೋಗಿದ್ದಕ್ಕೆ ನಾಚಿದ. ಅವಳನ್ನು ಪ್ರೀತಿಸುವ ಹುನ್ನಾರಕ್ಕೆ ದೇವರು ಮೆಚ್ಚುವನೆ? ಎಂಬ ಪಶ್ಚಾತ್ತಾಪದ ಸ್ವಗತ ಅವನ ಮನದಲ್ಲಿ ಥಕ ಥೈ ಎಂದು ಕುಣಿದಾಡಿದವು.

ಸುಂದರವಾಗಿ ಮುತ್ತು ಪೋಣಿಸಿದ, ಥಳಥಳ ಹೊಳೆಯುವ ವಿವಿಧ ವರ್ಣರಂಜಿತ ರಾಖಿ ಅವನನ್ನು ನೋಡಿ ಅಣಕಿಸಿತ್ತು! ಸುನೀತಾ, ರಂಜನಿ ಕಿಸಕ್ಕನೆ ನಕ್ಕಂತೆ ಭಾಸವಾಗಿತ್ತು.

■

■ ಗೀತಾ ಸೀತಾರಾಮ್

ಸಮಾಜ ಶಾಸ್ತ್ರದ ಎಂ.ಎ. ದ್ವಿತೀಯ ವರ್ಷದ ವಿದ್ಯಾರ್ಥಿಗಳೆಲ್ಲಾ ನೇಪಾಳಕ್ಕೆ ಪ್ರವಾಸ ಬಂದಿದ್ದೆವು. ಅಲ್ಲಿಯ ಬುಡಕಟ್ಟು ಜನಾಂಗದ ಬಗ್ಗೆ ಆಳವಾದ ಅಧ್ಯಯನ ನಡೆಸಿ ಪ್ರಬಂಧ ಬರೆಯುವುದು ನಮ್ಮ 'ಪ್ರಾಜೆಕ್ಟ್ ವರ್ಕ್' ಆಗಿತ್ತು. ನಮ್ಮದೇ ಒಂದು ಮಿನಿ ಬಸ್ ಮಾಡಿಕೊಂಡು ಬಂದಿದ್ದೆವು, ನಮ್ಮ ಸಹ ಪ್ರಾಧ್ಯಾಪಕರಾಗಿದ್ದ ಡಾ.ಹೃಷಿಕೇಶ್‌ರೊಂದಿಗೆ.

ನೇಪಾಳದ ರಾಜಧಾನಿ ಕಠ್ಮಂಡುವಿನಿಂದ ಎರಡು ಗಂಟೆ ಪ್ರಯಾಣ ಮಾಡಿ 'ಧುಲಿಕೇಲ್' ನಲ್ಲಿರುವ 'ಕವ್ರೆಪಲಂಚೋರ್' ಎಂಬ ಜಿಲ್ಲೆ ತಲುಪಿದೆವು. ಅದನ್ನೇ ಅಲ್ಲಿಯ ಜನ 'ಕವ್ರೆ' ಎನ್ನುತ್ತಾರೆ. ಅದರಲ್ಲಿರುವ 'ಹೋಕ್ಸೆ' ಎಂಬ ಗ್ರಾಮದ ಜನಜೀವನ ನಮ್ಮ 'ಸರ್ವೆ'ಯ ಸ್ಯಾಂಪಲ್ ಜನಸ್ತೋಮವಾಗಿತ್ತು. ಅಲ್ಲಿದ್ದ ನಾಲ್ಕಾರು ದಿನಗಳಲ್ಲಿ ನಾವು ಅಲ್ಲಿಯ ಬುಡಕಟ್ಟು ಜನಾಂಗದ ರೀತಿ ನೀತಿಗಳು, ಜೀವನ ಶೈಲಿ, ಊಟ ಉಡುಗೆಗಳು, ಸಾಮಾಜಿಕ ವ್ಯವಸ್ಥೆ, ಹಬ್ಬ ಹರಿದಿನಗಳು, ಸಂಪ್ರದಾಯಗಳು, ಮೂಢನಂಬಿಕೆಗಳು ಇವುಗಳೆಲ್ಲದರ ಕುರಿತು ಸಾಕಷ್ಟು ಟಿಪ್ಪಣಿ ಮಾಡಿಕೊಂಡೆವು.

ಆ ಗ್ರಾಮದಲ್ಲಿ ಮುಖ್ಯವಾಗಿ ನಾವು ಕಂಡದ್ದು ಹಣಕ್ಕಾಗಿ ಮೂತ್ರಪಿಂಡ ದಾನ ಎಂಬ ಸಾಮಾಜಿಕ ಪಿಡುಗು. 2014ರಲ್ಲಿ ಭೂಕಂಪವಾಗಿದ್ದರಿಂದ ಅಲ್ಲಿಯ ಜನಜೀವನ ತುಂಬಾ ಹದಗೆಟ್ಟು ಹೋಗಿತ್ತು. ಎಲ್ಲವನ್ನು ಪ್ರಾರಂಭದಿಂದ ಪುನಸ್ಥಾಪಿತಗೊಳಿಸಬೇಕಾದ ಪರಿಸ್ಥಿತಿ ಉಂಟಾಗಿತ್ತು. ಎಲ್ಲೆಲ್ಲೂ ಕಡುಬಡತನ. ನಾನೊಂದು ಮನೆಗೆ ಕಾಲಿಟ್ಟಾಗ ಸುಮಾರು ನಲವತ್ತೆಂಟರ ಪ್ರಾಯದ ರಾಮಜೋಷಿ ಎಂಬುವವ ಬಾಗಿಲು ತೆರೆದ. ಅವನು ಸಿಮೆಂಟ್ ಕಂಪೆನಿಯೊಂದರಲ್ಲಿ ಕೂಲಿ ಮಾಡುತ್ತಾ ನಾಲ್ಕಾರು ಮನೆಗಳಿಗೆ ಹಾಲು ಮಾರುತ್ತಾ, ನೆಮ್ಮದಿಯ ಜೀವನ ನಡೆಸುತ್ತಿದ್ದನಂತೆ. ಭಾರತದ ಚೆನ್ನೈ ನಗರದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಉದ್ಯೋಗ ಕೊಡಿಸುವುದಾಗಿ ಸುಳ್ಳು ಆಶ್ವಾಸನೆ ಯಿತ್ತು, ಅವನನ್ನು ಚೆನ್ನೈಗೆ ಕರೆದೊಯ್ದರಂತೆ. ಆರೋಗ್ಯ ತಪಾಸಣೆ ಮಾಡಿಸುತ್ತೇವೆಂದು ಹೇಳಿ ಮೂತ್ರಪಿಂಡದ ಶಸ್ತ್ರಚಿಕಿತ್ಸೆ ಮಾಡಿ, ಮೂವತ್ತು ಸಾವಿರ ಪರಿಹಾರ ಧನ ಕೊಟ್ಟು, ನೇಪಾಳಕ್ಕೆ ಹಿಂತಿರುಗಿ ಕಳುಹಿಸಿಬಿಟ್ಟರಂತೆ. ಪಾಪ! ನೇಪಾಳಕ್ಕೆ ಬಂದ ಮೇಲೆಯೇ ಅವನಿಗೆ ತಿಳಿದದ್ದು ತನ್ನ ಮೂತ್ರಪಿಂಡ ಹೋಗಿದೆ ಎಂದು! ಅವನ ಹೆಂಡತಿ, ಶಾಲೆಯಲ್ಲಿ ಓದುತ್ತಿದ್ದ ಪ್ರಾಯದ ಮಗಳು, ಈಗ ಹೊಲಗಳಲ್ಲಿ ದುಡಿಯುತ್ತಾ ಸಂಸಾರದ ಭಾರ ಹೊರುತ್ತಿದ್ದಾರೆ ಎಂದು ದುಃಖದಿಂದ ಹೇಳಿಕೊಂಡ.

ಜುಲೈ 1994ರಲ್ಲಿ ಭಾರತದಲ್ಲಿ ದೈಹಿಕ ಅಂಗಾಂಗಳ 'ಟ್ರಾನ್ಸ್‌ಪ್ಲಾಂಟೇಷನ್ ಆ್ಯಕ್ಟ್'